## ಎರಡು ಸಿನಿಮಾಗಳಿಗೆ 'ಪರಸ್ಪರ' ವೇದಿಕೆ

ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು, ಪ್ರಶಸ್ತಿಗಳನ್ನು ಪಡೆದು ವಿಮರ್ಶಾತ್ಮಕವಾಗಿ ಮೆಚ್ಚುಗೆ ಪಡೆದ ಎರಡು ಕನ್ನಡ ಸಿನಿಮಾಗಳು 'ಪರಸ್ಪರ' ಜೊತೆಯಾಗಿ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿವೆ.

ಭಿನ್ನ ಪ್ರಯೋಗದ ಮೂಲಕ ಜನರೆದುರಿಗೆ ಬರುವ ನಿರ್ಧಾರವನ್ನು 'ಕೋಳಿ ಎಸ್ರು' ಹಾಗೂ 'ಹದಿನೇಳೆಂಟು' ತಂಡ ಮಾಡಿದೆ. ನಿರ್ದೇಶಕರಾದ ಚಂಪಾ ಪಿ. ಶೆಟ್ಟಿ ಹಾಗೂ ಪೃಥ್ವಿ ಕೊಣನೂರ್ ಅವರು ಜೊತೆಯಾಗಿ ಈ ಸಾಹಸಕ್ಕೆ ಕೈಹಾಕಿದ್ದಾರೆ. ಈ ಎರಡೂ ಸಿನಿಮಾಗಳು 2024ರ ಜನವರಿ 26ರಂದು ರಾಜ್ಯದಾದ್ಯಂತ ಮಲ್ಟಿಪ್ಲೆಕ್ಸ್‌ಗಳಲ್ಲಿ ಬಿಡುಗಡೆಯಾಗಲಿವೆ.

₹400ಕ್ಕೆ ಈ ಎರಡೂ ಸಿನಿಮಾದ ಟಿಕೆಟ್‌ಗಳನ್ನು ಆಸಕ್ತರು ಖರೀದಿಸಬಹುದು ಅಥವಾ ಇಂತಹ ಸದಭಿರುಚಿಯ ಚಿತ್ರಗಳಿಗೆ ಹಣದ ರೂಪದಲ್ಲಿ ಪ್ರೋತ್ಸಾಹ ನೀಡಲು ಇಚ್ಛಿಸುವವರು ಆ ಮಾರ್ಗ ಅನುಸರಿಸಬಹುದು. ಈ ಎರಡೂ ಪ್ರಕ್ರಿಯೆಗಳಿಗಾಗಿ ತಂಡವು 'ಪರಸ್ಪರ' ವೆಬ್‌ಸೈಟ್ ರೂಪಿಸಿದೆ. ಈ ಹಣವನ್ನು ಸಿನಿಮಾ ಪ್ರಚಾರ, ವಿತರಣೆಗೆ ಬಳಸಿಕೊಳ್ಳಲಿದೆ. ಕನ್ನಡ ಚಿತ್ರರಂಗದಲ್ಲಿ ಈ ಪ್ರಯೋಗ ಹೊಸದು. ಹೆಚ್ಚಿನ ಮಾಹಿತಿಗೆ: paraspara.live







ಹಾಗೂ 'ಉತ್ತಮ ಬಾಲನಟಿ' ಪ್ರಶಸ್ತಿ ಬಂತು. ಬೆಂಗಳೂರಿನ ಸಿನಿಮೋತ್ಸವದಲ್ಲಿ 'ಉತ್ತಮ ಸಿನಿಮಾ' ಪ್ರಶಸ್ತಿ ಬಂತು.

◆ 'ಕೋಳಿ ಎಸ್ರು' ಸಿನಿಮಾ ಕುರಿತು...

ಕಥೆಗಾರ ಕಾ.ತ. ಚಿಕ್ಕಣ್ಣ ಅವರ 'ಹುಚ್ಚೀರಿ ಎಸರಿನ ಪ್ರಸಂಗ' ಎಂಬ ಕಥೆ ಇದರ ಮೂಲ. ಹಸಿವು, ಬಡತನ ಮುಖ್ಯ ವಿಷಯ. ಮಹಿಳಾ ದೃಷ್ಟಿಯಿಂದ ಸಿನಿಮಾಗೆ ಬೇಕಿದ್ದನ್ನು ಒಗ್ಗಿಸಿ ಮಾಡಿದ್ದು. ತಾಯಿ–ಮಗಳ ಸಂಬಂಧ, ತಾಯಿಯ ಒಳ ಹೊರಗಿನ ಸಾಮಾಜಿಕ ಹೋರಾಟ ಇವೆಲ್ಲವೂ ಕೋಳಿ ಸಾರನ್ನು ಕೇಂದ್ರವಾಗಿಟ್ಟುಕೊಂಡು ಸಾಗುತ್ತದೆ. ಹಿಂದೆ ನಾನೇ ನಾಟಕದಲ್ಲಿ 'ಹುಚ್ಚೀರಿ' ಪಾತ್ರದಲ್ಲಿ ಅಭಿನಯಿಸಿದ್ದೆ. ಆಗಿನಿಂದ ಕಾಡಿದಂಥ ಕಥೆಯಿದು. ಈಗ ಸಿನಿಮಾ ಆಗಿದೆ.

◆ ನಿಮ್ಮ ಮುಂದಿನ ಯೋಜನೆಗಳು?

ವೈದೇಹಿ, ಜೋಗಿ ಹಾಗೂ ದು. ಸರಸ್ವತಿ, ಈ ಮೂರು ಜನರ ಮೂರು ಕಥೆಗಳ ಸಿನಿಮಾ ಮಾಡುವ ಯೋಜನೆಯಿದ್ದು, ಸ್ಕ್ರಿಪ್ಟಿಂಗ್ ಪ್ರಕ್ರಿಯೆ ನಡೆಯುತ್ತಿದೆ. ■

# ನಾನೆಂದೆಂದೂ ಕನ್ನಡದ ಹುಡುಗಿ

ಕೊರೊನಾ ನಂತರದ ದಿನಗಳಲ್ಲಿ ಹಲವು ಕನ್ನಡ ನಟ–ನಟಿಯರು ತಮ್ಮ ಚೌಕಟ್ಟುಗಳನ್ನು ಮೀರಿ ಬೇರೆ ಬೇರೆ ಭಾಷೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಾಗೇ ಕನ್ನಡ ನಟಿ ಆಶಿಕಾ ರಂಗನಾಥ್ ಕೂಡ ಪರಭಾಷಾ ಚಿತ್ರಗಳಲ್ಲಿ ತಮ್ಮ ಅದೃಷ್ಟದ ಪರೀಕ್ಷೆ ನಡೆಸಿದ್ದಾರೆ.

ತೆಲುಗು ಭಾಷೆಯ ಎರಡು ಸಿನಿಮಾಗಳಲ್ಲಿ ನಟಿಸಿರುವ ಆಶಿಕಾ, ಸದ್ಯ 'ನಾ ಸಾಮಿ ರಂಗ' ಸಿನಿಮಾದಲ್ಲಿ ತೊಡಗಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ, ತಮ್ಮ ಸಿನಿಮಾ ಬದುಕಿನ ಕುರಿತು ಸಂದರ್ಶನವೊಂದರಲ್ಲಿ ಮಾತನಾಡಿದ್ದಾರೆ.

'ಕೊರೊನಾ ಸೋಂಕು ಕಾಲಿಟ್ಟ ನಂತರ ಹಲವು ಬದಲಾವಣೆಗಳಾದವು. ಜನರು ಇಡೀ ಜಗತ್ತಿನಲ್ಲಿ ಸಿಗುವ ಎಲ್ಲಾ ಮನರಂಜನಾ ಕಂಟೆಂಟ್‌ಗಳನ್ನು ನೋಡಲು ಶುರುಮಾಡಿದರು. ಇಡೀ ಆಟ ಬದಲಾದದ್ದು ಆಗಲೇ. ಆಗಲೇ ನನಗೂ ಹೊಸ ಪ್ರಯೋಗಕ್ಕೆ ಒಳಗಾಗುವ ಆಲೋಚನೆ ಬಂದಿದ್ದು. ಸಿನಿಮಾ ಬದುಕಿನ ಬಗ್ಗೆ ನಾನು ತುಂಬಾ ಪ್ಯಾಷನೇಟ್ ಆಗಿದ್ದೇನೆ. ಹೀಗಾಗಿ ನನ್ನ ಕರಿಯರ್ ಮೇಲೆತ್ತಬಲ್ಲ ಯಾವುದೇ ರಿಸ್ಕ್ ತೆಗೆದುಕೊಳ್ಳಲು ಸದಾ ಸಿದ್ಧ' ಎಂದು ಆಶಿಕಾ ಹೇಳಿಕೊಂಡಿದ್ದಾರೆ.

ಸಿನಿಮಾದ ಸ್ಕ್ರಿಪ್ಟ್ ಆಯ್ಕೆ ಕುರಿತು ಮಾತನಾಡಿರುವ ಅವರು, 'ಕಥೆ ಕೇಳುವಾಗ, ಆ ಕಥೆ ನನ್ನನ್ನು ಎಕ್ಸೈಟ್ ಮಾಡಬೇಕು. ಕೆಲ ಕಾಲ ತಲೆಯಲ್ಲಿ ಗುಯ್‌ಗುಡಬೇಕು. ನನ್ನೊಂದಿಗೆ ಉಳಿದಂತೆ ಅನ್ನಿಸಬೇಕು. ಆಗಲೇ ಆ ಸ್ಕ್ರಿಪ್ಟ್‌ಗೆ ನಾನು ಯೆಸ್ ಎನ್ನುವುದು' ಎಂದಿದ್ದಾರೆ.

ಶೂಟಿಂಗ್ ನಡುನಡುವೆ ತೆಲುಗು ಭಾಷೆಯನ್ನೂ ಕಲಿಯುತ್ತಿದ್ದಾರೆ. 'ಹೊಸ ಭಾಷೆಯನ್ನು ಕಲಿಯುವುದು ಚೆಂದದ ಅನುಭವ. ಶೂಟಿಂಗ್‌ನಲ್ಲಿ ಕೆಲವು ತೆಲುಗು ಪದಗಳನ್ನು ಕೇಳುತ್ತಿರುತ್ತೇನೆ, ಅವನ್ನು ಕಲಿಯುತ್ತೇನೆ' ಎನ್ನುತ್ತಲೇ, 'ನಾನು ಎಲ್ಲೇ ಇದ್ದರೂ ಬೆಂಗಳೂರು ಹುಡುಗಿ. ಅಲ್ಲಿಂದ ಹೊಸ ಹೊಸ ಅನುಭವಗಳನ್ನು ಪಡೆಯುತ್ತಿದ್ದೇನೆ. ನನ್ನ ಬಗ್ಗೆ ಅಭಿಮಾನಿಗಳು ತುಂಬಾ ಪೊಸೆಸಿವ್ ಆಗಿದ್ದಾರೆ. ನಾನು ಈಗ ಹಾಗೂ ಮುಂದೆ, ಎಂದೆಂದೂ ಕನ್ನಡದ ಹುಡುಗಿಯೇ' ಎಂದು ಅಭಿಮಾನಿಗಳ ಕುರಿತು ಪ್ರೀತಿಯ ಮಾತುಗಳನ್ನಾಡಿದ್ದಾರೆ. ■

